ಶ್ರೀ ಬಿ. ಹುಚ್ಚೇಗೌಡ.—ಎಸ್ಟಿಮೇಟುಗಳು ಮಂಜೂರಾಗುವ stage ನಲ್ಲಿವೆಯೇ ?

Sri Kadidal MANJAPPA.—In the case of Mallidevanahally a detailed estimate is to be got up by the Executiue Engineer; Kanakuru tank estimate is likely to be sent to Government shortly; in the case of Hithalakoppa tank, it is already under cultivation, and Dodmalligere estimate is Rs. 77,000. The area to be benefited in the case of the last tank is 99 acres.

ಶ್ರೀ ಬಿ. ಹುಚ್ಚೇಗೌಡ.—ಹಿತ್ತಲಕೊಪ್ಪ ಕೆರೆ ಪುರುವಾಗಿ ಎಷ್ಟು ವರ್ಷವಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—1946ರಲ್ಲಿ ಕೆಲಸ ಸ್ಯಾಕ್ಷನ್ ಆಯಿತು. ಕೆಲವು ವರ್ಷಗಳನಂತರ ಕೆಲಸ ನಿಲ್ಲಿಸಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಕೆಲಸವನ್ನು ಪೂರ್ತಿ ಮಾಡುತ್ತಿರಾ ?

ಶ್ರೀ ಕಡಿದಾಳ್ ಮಂಜಪ್ಪ.—40,000 ರೂಪಾಯಿಗಳಿಗೆ ಎಸ್ಟಿಮೇಟಾಗಿದೆ. ಆ ಎಸ್ಟಿಮೇಟ್ ಪ್ರಕಾರ ಕೆಲಸ ತೆಗೆದುಕೊಂಡರೆ ಬಹಳ unremunerative ಆಗುತ್ತದೆಂದು ಎಕ್ಸಿಕ್ಯೂಟಿವ್ ಎಂಜಿನಿಯರಿಂದ ವರದಿ ಬಂದಿದೆ. ಅದರ ಮೇಲೆ ಹೊಸದಾಗಿ ಕಾಮಗಾರಿಯನ್ನು ಎಸ್ಟಿಮೇಟ್ ಮಾಡಬೇಕೆಂದು ಹೇಳಿದರಮೇರೆ, ಈಗ ಮತ್ತೆ ಅಂದಾಜಾಗಿ ಒಂದು comprehensive estimate ಈಗ ಬಂದಿದೆ.

ಶ್ರೀ ಬಿ. ಹುಚ್ಚೇಗೌಡ.—ಈ ಕೆರೆಯ ಕೆಲಸವನ್ನು ತಾವು ಕಂಪ್ಲೀಟ್ ಮಾಡುತ್ತೀರೋ ಅಥವಾ ಇದನ್ನು ಅಬ್ಯಾಂಡನ್ ಮಾಡುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಕೆಲಸಗಳ ಬಗ್ಗೆ ಆಫೀಸರು ಅಂದಾಜುಗಳಿನ್ನೂ ಬಂದಿಲ್ಲ. ಬಂದಕೂಡಲೇ ನಾವು ಈ ಬಗ್ಗೆ ಆಫೀಸರು ತೀರ್ಮಾನವನ್ನು ಕ್ಯೆಗೊಳ್ಳುತ್ತೇವೆ.

---

## Middle School in Immadahalli (Building Construction).

*Q.*—375. Sri B. T. KEMPARAJ (Bangalore South—Scheduled Castes).—

Will the Government be pleased to state :—

(*a*) the estimated amount sanctioned for the construction of Middle School in Immadahalli, Varthur Hobli, Bangalore South;

(*b*) the additional amount needed for the completion of the work;

(*c*) when the work will be commenced ?

*A.*—Sri Kadidal MANJAPPA (Minister for Revenue and Public Works).—

(*a*) The estimated amount is Rs. 7,600, but the estimate has not yet been sanctioned.

(*b*) Does not arise in view of reply to (*a*).

(*c*) The work will be taken up after the estimate is sanctioned and funds are made available.

ಶ್ರೀ ಬಿ. ಟಿ. ಕೆಂಪರಾಜ್.—ತಾವು ಒದಗಿಸಿರುವ ಉತ್ತರದಲ್ಲಿ ಹಣವನ್ನು ಇನ್ನೂ ಮಂಜೂರು ಮಾಡಬೇಕಾಗಿದೆ ಎಂದು ಹೇಳಿದ್ದೀರಿ. ಆ ಹಣ ಮಂಜೂರಾಗುವುದಕ್ಕೆ ಇನ್ನೂ ತಮಗೆ ಎಷ್ಟು ದಿನಗಳು ಬೇಕಾಗಬಹುದು ?

ಶ್ರೀ ಕಡಿದಾಳ್ ಮಂಜಪ್ಪ.—ಆ ಅಂದಾಜನ್ನು ಕವುಂಟರ್-ಸೈನ್ ಮಾಡಿ ಕಳುಹಿಸಲು ಡಿ. ಪಿ. ಐ. ರವರಿಗೆ ಕಳುಹಿಸಿಕೊಡಲಾಗಿದೆ. ಅದು ಬಂದನಂತರ ಹಣವನ್ನು ಮಂಜೂರು ಮಾಡಲಾಗುತ್ತದೆ.

ಶ್ರೀ ಬಿ. ಟಿ. ಕೆಂಪರಾಜ್.—ಈಗಾಗಲೇ ಆ ಸ್ಥಳದಲ್ಲಿ ಒಂದು ಕಟ್ಟಡ ಸಿದ್ಧವಾಗಿದೆ ಅನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಈ ಇಮ್ಮಡಿಹಳ್ಳಿ ಸ್ಕೂಲ್ ಕಟ್ಟಡದ ಪ್ಲಾನು ಮಾಡುವುದಕ್ಕೆ ಮತ್ತು ಈಗ ಆಗಿರತಕ್ಕ ಕೆಲಸಗಳಿಗೆಲ್ಲಾ ದುಡ್ಡು ಕೊಡದೆ ಅದು ಆಗಿದೆಯೇ ಎಂಬ ಅಂಶವೂ ತಮ್ಮ ಗಮನಕ್ಕೆ ಬಂದಿಲ್ಲವೋ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಹಾಗಾದರೆ ತಾವೀಗ ಮಂಜೂರು ಮಾಡಬೇಕೆಂದು ಉದ್ದೇಶಿಸಿರತಕ್ಕ ಆ ಸ್ಕೂಲು ಕಟ್ಟಡ ಯಾವುದು ?

ಶ್ರೀ ಕಡಿದಾಳ್ ಮಂಜಪ್ಪ.—ಇಮ್ಮಡಿಹಳ್ಳಿ ಮಿಡಲ್ ಸ್ಕೂಲ್ ಕಟ್ಟಡ ಎಂದು ಉತ್ತರದಲ್ಲೇ ತಿಳಿಸಲಾಗಿದೆ.

ಶ್ರೀ ಬಿ. ಟಿ. ಕೆಂಪರಾಜ್.—ಈಗ ಅಲ್ಲಿ ಹಾಲ ಆಗಿರುವ ಕಟ್ಟಡವನ್ನು ಬಿಟ್ಟು ತಾವು ಬೇರೆ ಮತ್ತೊಂದು ಕಟ್ಟಡ ಕಟ್ಟಿಸಬೇಕೆಂಬುದು ತಮ್ಮ ಅಭಿಪ್ರಾಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಅಲ್ಲಿ ತಯಾರಾಗಬೇಕಾದಂಥ ಮಿಡಲ್ ಸ್ಕೂಲಿನ ಎಸ್ಟಿಮೇಟ್ ತಯಾರಾಗಿದೆ. ಅದನ್ನು ಕವುಂಟರ್ ಸಿಗ್ನೇಚರಿಗಾಗಿ ಡಿ. ಪಿ. ಐ. ರವರಿಗೆ ಕಳುಹಿಸಿಕೊಡಲಾಗಿದೆ.

ಶ್ರೀ ಬಿ. ಟಿ. ಕೆಂಪರಾಜ್.—ಈಗಾಗಲೇ ಅಲ್ಲಿ ಸ್ಕೂಲು ಬಿಲ್ಡಿಂಗ್ ತಯಾರಾಗಿ ಮೂರು ವರ್ಷಗಳ ಮೇಲಾಯ್ತು ಅನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಹಾಗಾದರೆ ಈಗ ಅಲ್ಲಿರತಕ್ಕಂಥ ಕಟ್ಟಡವನ್ನು ಯಾರು ಕಟ್ಟಿಸಿದರು ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ತಮಗೇ ಗೊತ್ತಿರಬೇಕು.

ಶ್ರೀ ಬಿ. ಟಿ. ಕೆಂಪರಾಜ್.—ಹಾಗಾದರೆ ತಾವು ಮಾಡತಕ್ಕಂಥ ಕೆಲಸ ಕಾರ್ಯಗಳಲ್ಲಿ ತಾವು ಎಷ್ಟರ ಮಟ್ಟಿಗೆ ಎಚ್ಚರಿಕೆಯನ್ನು ವಹಿಸಬೇಕೋ ಅಷ್ಟರ ಮಟ್ಟಿಗೆ ತಾವು ವಹಿಸುತ್ತಿಲ್ಲವೆಂದು ಹೇಳಿದರೆ ಅದನ್ನು ತಾವು ಒಪ್ಪಿಕೊಳ್ಳುತ್ತಿರಾ ! ತಾವು ಮಾಡತಕ್ಕಂಥ ಕೆಲಸ ಕಾರ್ಯಗಳಾವುವು ಎಂಬುದನ್ನು ಹೇಳುವುದಕ್ಕೆ ತಮಗೆ ಸಾಧ್ಯವಿಲ್ಲ ಅಂದರೆ ತಾವು ಅಷ್ಟು ಎಚ್ಚರಿಕೆಯಿಂದ ವರ್ತಿಸುತ್ತಿಲ್ಲವೆಂದರೆ ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಉಹಾಪೋಹದ ಪ್ರಶ್ನೆ—ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಕಟ್ಟಡದ ಅಂದಾಜನ್ನು ಯಾವಾಗ ತಯಾರು ಮಾಡಲಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.. ಯಾವಾಗ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆ ಎಸ್ಟಿಮೇಟನ್ನು ಬೇಗ ತರಿಸಿ ಬೇಗ ಮಂಜೂರು ಮಾಡಲು ಪ್ರಯತ್ನ ಮಾಡುತ್ತೀರಾ ?

Mr. SPEAKER.—It does not arise because the Government have not yet sanctioned the estimate; they have not entrusted the work to anybody.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ನಾನು ಈ ಪ್ರಶ್ನೆಯನ್ನು ಏತಕ್ಕಾಗಿ ಕೇಳುತ್ತಿದ್ದೇನೆಂದರೆ—ಈ ಕಟ್ಟಡದ ಖರ್ಚಿನಲ್ಲಿ ಅರ್ಧ ಭಾಗವನ್ನು ಆ ಹಳ್ಳಿಯವರು ಕೊಡಬೇಕೆಂದೂ, ಇನ್ನರ್ಧ ಭಾಗವನ್ನು ಸರ್ಕಾರದವರು ಗ್ರಾಂಟ್ ರೂಪವಾಗಿ ಕೊಡಬೇಕೆಂದೂ ತೀರ್ಮಾನವಾಗಿತ್ತು. ಆದರೆ ಈಗ ಹಳ್ಳಿಯವರು ಆ ಕೆಲಸವನ್ನು ಪೂರ್ತಿ ಮಾಡಿದ್ದಾರೆ. ಈ ಬಗ್ಗೆ ಸರ್ಕಾರದ ಗ್ರಾಂಟ್ ಇನ್ನೂ ಸಂದಾಯವಾಗಿಲ್ಲದ ಕಾರಣ ಅದರ ಅಂದಾಜನ್ನೀಗ ಕವುಂಟರ್ ಸೈನಿಗೆ ಕಳುಹಿಸಿರಬಹುದೆಂದು ಕಾಣುತ್ತದೆ. . . .

Mr. SPEAKER.—That is a hypothetical question; neither the Minister nor the Hon'ble Member knows what the position is.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅದರ ವಿಚಾರ ಪೇನಾಗಿದೆಯೆಂಬುದನ್ನು ತಿಳಿದು ಬೇಗ ಅದನ್ನು ಮಂಜೂರು ಮಾಡುವಂತೆ ಪ್ರಯತ್ನ ಪಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಾಳೆ ನಾನು ಈ ವಿಚಾರ ತಿಳಿದು ತಮಗೂ ತಿಳಿಸುತ್ತೇನೆ. ಇದು ಒರಿಜಿನರ್ ಎಸ್ಟಿಮೇಟಿನ ವಿಚಾರ ಸಹ ತಿಳಿಸುತ್ತೇನೆ.

---

## Patels in Sandur Firka.

Q.—152. Sri Kotra BASAVANA GOUD (Kudligi)—

Will the Government be pleased to state :

(*a*) the names of Patels in Sandur firka in Bellary District;

(*b*) since how many years these people are in office ?

*A.*—Sri Kadidal MANJAPPA. (Minister for Revenue and Public Works).—

(*a*) and (*b*) Please see the Statement appended below.

| *Names of Patels and Villages to which they are attached.* | *Since how many years these people are in service.* |
|---|---|
| Sriyuths— | |
| 1. G. Komarappa for Sandur Village ... | Since about 15 years |
| 2. Shanmukhangoud for Lakmipur and Hulikunta Villages. | 10 years |
| 3. Shanmukha Rao Nalavade for Krishnanagar Village ... | 20 years |
| 4. Chimpagara Basappa for Dowlatpur Village ... | 15 years |
| 5. Sivashanmukhagoud for Bhujanagar and Narasingapur Villages ... ... | 6 years |
| 6. K. Basavangoud for Yesavantanagar ... ... | 2 years |
| 7. K. Subba Rao for Taranagar and Sankarapur Villages... | 6 years |
| 8. Reddikenchangoud for Dharmapur Village ... | 20 years |
| 9. Rudragoud for Susilanagar and Radhanagiri and Ramagad Villages ... .... | 35 years |
| Vacant for Siddapur Village ... ... | *Vacant* |
| 10. G. Laxmana Rao, Village Munsiff of Jayasingapur is in additional charge of Siddapur Village ... | 5 years |
| 11. G. Laxmana Rao for Jayasingapur Village ... | 15 years |
| 12. Mahadevangoud for Ranjitpur Village ... | 12 years |
| 13. Komaragoud for Narayanapur Village ... | 12 years |
| 14. Hanumanthagoud for Deogri Village ... | 15 years |

ಶ್ರೀ ಕೊಟ್ರ ಬಸವನಗೌಡ.—ಸಂಡೂರಿನ ಎಕ್ಸ್ ರೂಲರ್ ಅವರು ಆ ಬಳ್ಳಾರಿ ಫಿರ್ಕಾದಲ್ಲಿರುವ 5-6 ಗ್ರಾಮಗಳ ಪಟೇಲರನ್ನು ಕೆಲಸದಿಂದ ತೆಗೆದು ಹಾಕಿ ಸೌರಾಷ್ಟ್ರದ ಕಡೆಯಿಂದ ತಮ್ಮ ಜನಗಳನ್ನು ತಂದು ಅಲ್ಲಿಗೆ ಪಟೇಲರನ್ನಾಗಿ ಮಾಡುತ್ತಿರುವ ವಿಚಾರ ತಮ್ಮ ಅವಗಾಹನೆಗೆ ಬಂದಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಆ ವಿಷಯವನ್ನು ವಿಚಾರ ಮಾಡುತ್ತೇವೆ.

ಶ್ರೀ ಕೊಟ್ರ ಬಸವನಗೌಡ.—ಈ ಬಗ್ಗೆ ಅರ್ಜಿ ಕೊಟ್ಟರೆ ವಿಚಾರಣೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅರ್ಜಿ ಕೊಟ್ಟರೆ ವಿಚಾರ ಮಾಡುತ್ತೇವೆ.